**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ.**

**ಸೆಷನ್ಸ್ ಕೇಸ್ ನಂಃ 31/2015 ಅಸಾ.3**

**ಚಾಸಾ.10**

| | | |
|---|---|---|
| ಸಾಕ್ಷಿದಾರರ ಹೆಸರು | - | ಕೆ.ಪ್ರಕಾಶ್ |
| ತಂದೆಯ ಹೆಸರು | - | ಲೇಟ್ ಕೆ.ಗೋಪಾಲಕೃಷ್ಣ |
| ವಯಸ್ಸು | - | 66 ವರ್ಷ |
| ಉದ್ಯೋಗ | - | ನಿವೃತ್ತ ಪಿ ಎಸ್ ಐ |
| ವಿಳಾಸ | - | ಮಂಗಳೂರು |

ದಿನಾಂಕಃ 06.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ :**

ನಾನು 2013 ನೇ ಸಾಲಿನಿಂದ ನವೆಂಬರ್ 2017 ರವರೆಗೆ ಉಡುಪಿ ನಗರ ಠಾಣೆಯಲ್ಲಿ ಎ.ಎಸ್.ಐ. ಆಗಿ ಕೆಲಸ ಮಾಡಿರುತ್ತೇನೆ. ಈ ಪ್ರಕರಣದಲ್ಲಿ ತನಿಖಾಧಿಕಾರಿಯು ನನಗೆ ಹಾಗೂ ಪಿಸಿ-2007 ರವರಿಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಯಸ್ಟೀಮ್ ಕಾರು ನಂ.ಕೆಎ -19-ಎನ್-8448 ನ್ನು ಪತ್ತೆ ಹಚ್ಚಿ ಹಾಜರುಪಡಿಸುವಂತೆ ಸೂಚಿಸಿ ಕಳುಹಿಸಿಕೊಟ್ಟಿರುತ್ತಾರೆ. ಆ ಪ್ರಕಾರ ವಾಹನ ಪತ್ತೆ ಕಾರ್ಯದಲ್ಲಿದ್ದಾಗ ಸದ್ರಿ ವಾಹನ ಮಂಗಳೂರಿನ ಕೃಷ್ಣಾಪುರದಲ್ಲಿದ್ದ ಬಗ್ಗೆ ಮಾಹಿತಿ ಬಂದಿದ್ದು, ಹೋಗಿ ನೋಡಲಾಗಿ, ಸದ್ರಿ ವಾಹನ ಕೃಷ್ಣಾಪುರ ಮಠದ ಹತ್ತಿರ ಸಿಕ್ಕಿರುತ್ತದೆ. ನಂತರ ಸದ್ರಿ ವಾಹನದ ಆಸುಪಾಸಿನಲ್ಲಿ ಯಾರೂ ಇಲ್ಲದ ಕಾರಣ ತಕ್ಷಣ ಮೆಕ್ಯಾನಿಕ್ ಕರೆಸಿಕೊಂಡು ವಾಹನವನ್ನು ಚಾಲನೆ ಮಾಡಿ ದಿನಾಂಕ 27-08-2014 ರಂದು ಮಧ್ಯಾಹ್ನ 2-45 ಗಂಟೆಗೆ ಉಡುಪಿ ನಗರ ಠಾಣೆಯಲ್ಲಿ ತನಿಖಾಧಿಕಾರಿ ಸಮಕ್ಷಮ ಹಾಜರುಪಡಿಸಿರುತ್ತೇವೆ. ಸದ್ರಿ ವಾಹನವನ್ನು ಪಂಚರ ಸಮಕ್ಷಮದಲ್ಲಿ ತನಿಖಾಧಿಕಾರಿ ಅಮಾನತ್ತು ಪಡಿಸಿಕೊಂಡು ವಿವರವಾದ ಪಂಚನಾಮೆ ಬರೆದಿರುತ್ತಾರೆ. ಸದ್ರಿ ಪಂಚನಾಮೆಗೆ ನಾನು, ಪಿಸಿ-2007, ಪಂಚರು ಮತ್ತು ತನಿಖಾಧಿಕಾರಿ ಸಹಿ ಮಾಡಿರುತ್ತೇವೆ. ಸದ್ರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸದ್ರಿ ವಾಹನವನ್ನು ನೋಡಿದರೆ

ಗುರುತಿಸುತ್ತೇನೆ. ಸದ್ರಿ ವಾಹನವನ್ನು ಗುರುತಿಸುವ ಬಗ್ಗೆ ಒಂದನೇ ಆರೋಪಿ ಪರ ವಕೀಲರ ತಕರಾರು ಇರುವುದಿಲ್ಲ.

**<u>ಪಾಟಿ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ವಾಹನವನ್ನು ವಶಕ್ಕೆ ಪಡೆದ ಸ್ಥಳದಲ್ಲಿ ಯಾವುದೇ ಪಂಚನಾಮೆಯನ್ನು ಮಾಡಿಲ್ಲ. ನಾನು ಹೇಳಿದ ರೀತಿ ವಾಹನವನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಮತ್ತು ಸದ್ರಿ ವಾಹನಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.